ಮಧ್ಯಂತರ ಅರ್ಜಿ ನಂಬರಃ 4 ಮತ್ತು 5 ನೇದ್ದವುಗಳ ಆದೇಶದ ಮೇರೆಗೆ ದಿನಾಂಕಃ 18-09-2018 ರಂದು ಪಿ.ಡಬ್ಲೂ-2 ರವರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ಎಸ್.ವಿ.ಎಂ ವಕೀಲರಿಂದಃ

ನಿ.ಪಿ-4 ರಲ್ಲಿರುವ ಸಹಿ ನನ್ನದೇ ಇರುತ್ತದೆ. ಅದು ಈಗಾಗಲೇ ನಿ.ಪಿ-4 ಎ ಎಂದು ಗುರುತಾಗಿರುತ್ತದೆ. ಸದರಿ ದಾಖಲೆಗೆ ವಾದಿ ಮತ್ತು ಪ್ರತಿವಾದಿಯರು ಸಾಕ್ಷಿದಾರರಾದ ಚನ್ನಬಸಪ್ಪ ಮಾಳೆಪ್ಪನವರ, ಮೌಲಾಲಿಗೌಡ ಪಾಟೀಲ, ಗುರುಸಂಗಪ್ಪ ತೆಗ್ಗಿಹಳ್ಳಿ ಇವರು ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ. ಸದರಿ ಸಾಕ್ಷಿದಾರರ ಪೈಕಿ ಚನ್ನಬಸಪ್ಪ ಮಾಳೆಪ್ಪನವರ ಮತ್ತು ಗುರುಸಂಗಪ್ಪ ತೆಗ್ಗಿಹಳ್ಳಿ ಇವರು ಪೋತಿಯಾಗಿರುತ್ತಾರೆ.

ಪಾಟೀ ಸವಾಲುಃ ಶ್ರೀ.ಎಂ.ಎಸ್.ಹೆಚ್ ವಕೀಲರಿಂದಃ

ನಾನು ಖಾಯಂ ಆಗಿ ಹರವಿ ಗ್ರಾಮದ ರಹವಾಸಿಯಾಗುತ್ತೇನೆ. ವಾದಿ ರುದ್ರಪ್ಪ ಹರವಿ ಗ್ರಾಮದವನು ಇರುತ್ತಾನೆ. ಪ್ರತಿವಾದಿಯು ಈಗ ಬಂಕಾಪುರ ಗ್ರಾಮದಲ್ಲಿ ಇರುತ್ತಾನೆ. ಮೊದಲು ಕೆಲಸ ಮಾಡುವಾಗ ಧಾರವಾಡದಲ್ಲಿ ಇದ್ದರು, ಈಗ ಬಂಕಾಪುರ ಗ್ರಾಮದಲ್ಲಿ ಇರುತ್ತಾರೆ. ನಾನು ಶೇತ್ಕರಿ ಕೆಲಸ ಮಾಡುತ್ತೇನೆ. ನನಗೆ ಸಂಬಂಧಿಸಿದ ಆರುವರೆ ಎಕರೆ ಜಮೀನು ಇರುತ್ತದೆ. ನನಗೆ ಸಂಬಂಧಿಸಿದ 19/1 ಕ್ಷೇತ್ರ 04 ಎ-22 ಗುಂಟೆ ಮತ್ತು ಅದರಲ್ಲಿ 01 ಎಕರೆ, ಇನ್ನೊಂದು ರಿ.ಸ.ನಂಬರಃ 16 ಕ್ಷೇತ್ರ 01 ಎ-34 ಗುಂಟೆ ಇರುತ್ತದೆ. ರಿ.ಸ.ನಂಬರಃ 19 ರ ಪೂರ್ವಕ್ಕೆಃ ಗುರುಸಿದ್ದಪ್ಪ ಭದ್ರಣ್ಣನವರ ಇವರ ಜಮೀನು, ಪಶ್ಚಿಮಕ್ಕೆಃ ತಳವಾರ ಹನುಮಂತಪ್ಪ, ದಕ್ಷಿಣಕ್ಕೆಃ ನಮ್ಮ ಅಣ್ಣನ ಮಗನಾದ ಸತೀಶನ ಹಲ, ಉತ್ತರಕ್ಕೆಃ ಬಂಕಪ್ಪ ಅಂಗಡಿ ಮತ್ತು ಆತನ ಸಹೋದರರ ಜಮೀನು ಇರುತ್ತದೆ. ವಾದಿಯು ಯಾವ ಮಾಗಣಿ ಕೇಳಿ ದಾವೆ ಮಾಡಿರುತ್ತಾನೆ ಅಂತಾ ನನಗೆ

ಗೊತ್ತಿರುವದಿಲ್ಲ. ನಾನು ವಾದಿ ಮತ್ತು ಪ್ರತಿವಾದಿಗೆ ಸಂಬಂಧಿಕರು ಇರುವದಿಲ್ಲ. ನಾನು ಗ್ರಾಮ ಪಂಚಾಯತಿ, ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿಯ ಸದಸ್ಯನು ಇರುವದಿಲ್ಲ. ವಾದಿಯು ಮಿಲಿಟರಿ ಸೇವೆಯಲ್ಲಿ ಎಷ್ಟು ವರ್ಷ ಇದ್ದ ಅನ್ನುವ ಬಗ್ಗೆ ನನಗೆ ಗೊತ್ತಿರುವದಿಲ್ಲ. ವಾದಿಯು ಎಷ್ಟು ವರ್ಷಕ್ಕೊಮ್ಮೆ ಊರಿಗೆ ಬಂದು ಹೋಗುತ್ತಿದ್ದ ಅನ್ನುವ ಬಗ್ಗೆ ನನಗೆ ಗೊತ್ತಿರುವದಿಲ್ಲ, ನನಗೆ ಅಷ್ಟು ಸಂಪರ್ಕ ಇರಲಿಲ್ಲ. ನನಗೆ ಅಷ್ಟು ಪರಿಚಯ ಇರಲಿಲ್ಲ. ವಾದಿಯು ಮಿಲಿಟರಿ ಸೇವೆಯನ್ನು ಬಿಟ್ಟ ಬಂದ ನಂತರ ಆತನ ಬಗ್ಗೆ ನನಗೆ ಗೊತ್ತಾಗಿರುತ್ತದೆ. ವಾದಿಯು 20-22 ವರ್ಷಗಳ ಹಿಂದೆ ಮಿಲಿಟರಿ ಸೇವೆಯನ್ನು ಬಿಟ್ಟು ಬಂದಿರುತ್ತಾನೆ.

ನಾನು ಸಾಕ್ಷಿ ಹೇಳಲು ಬಂದ ಆಸ್ತಿ ರಿ.ಸ.ನಂಬರಃ 63/3 ಇರುತ್ತದೆ. ನಾನು 12-13 ವರ್ಷಗಳ ಹಿಂದೆ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ಸದರಿ ಪಹಣಿ ಪತ್ರಿಕೆಯಲ್ಲಿ ಗದಿಗೆಪ್ಪ, ಗಿರಿಮಲ್ಲಪ್ಪ, ಚನ್ನಬಸಪ್ಪ, ಬಸಪ್ಪ ದೇವಗಿರಿ ಇವರ ಹೆಸರುಗಳು ದಾಖಲಾಗಿರುತ್ತವೆ. ಸದರಿ ರಿ.ಸ.ನಂಃ 63/3 ಕ್ಷೇತ್ರ 04 ಎ-15 ಗುಂಟೆ ಇರುತ್ತದೆ. ಸದರಿಯವರ ಹೆಸರು ಸಾಮೂಹಿಕವಾಗಿ ಇದ್ದ ಬಗ್ಗೆ ಮತ್ತು ಅವರವರ ಹೆಸರಿನ ಮುಂದೆ ಎಷ್ಟು ಕ್ಷೇತ್ರ ಇತ್ತು ಅಂತಾ ನಾನು ನೋಡಿರುವದಿಲ್ಲ

ಈಗ ನಾನು ಸಾಕ್ಷಿ ಹೇಳಲು ಬಂದ ದಾವಾದಾಸ್ತಿಯ ಪೂರ್ವಕ್ಕೆಃ ಈರಮ್ಮ ಸದಾಶಿವಪೇಟ, ಪಶ್ಚಿಮಕ್ಕೆಃ ಖಾಸಿಂಸಾಬ ಹರಪನಹಳ್ಳಿ ಇವರ ಜಮೀನು, ಉತ್ತರಕ್ಕೆಃ ರಿ.ಸ.ನಂಃ 63/3, ದಕ್ಷಿಣಕ್ಕೆಃ ಧರ್ಮಾ ನದಿ ಇರುತ್ತದೆ. ನಾನು ಈಗ 04 ಎ-15 ಗುಂಟೆಗೆ ಸಂಬಂಧಿಸಿದಂತೆ ಚೆಕಬಂದಿಯನ್ನು ಹೇಳಿರುತ್ತೇನೆ. ಈಗ ನಾನು ರುದ್ರಪ್ಪ ಗದಿಗೆಪ್ಪನಿಗೆ

ಕೊಟ್ಟ ಆಸ್ತಿಗೆ ಸಾಕ್ಷಿ ಹೇಳಲು ಬಂದಿರುತ್ತೇನೆ. ಸದರಿ ಆಸ್ತಿಯು ಧರ್ಮಾ ನದಿಯ ಕಡೆಗೆ ಇರುತ್ತದೆ ಅಂತಾ ನನಗೆ ಹೇಳಿರುತ್ತಾರೆ.

ಖರೀದಿ ಕರಾರು ಪತ್ರದಲ್ಲಿ ಏನೂ ಬರೆದಿರುತ್ತಾರೆ ಅಂತಾ ನನಗೆ ಗೊತ್ತಿರುತ್ತದೆ ನಿ.ಪಿ-4 ರಲ್ಲಿರುವ ಚೆಕಬಂದಿ ನನಗೆ ನೆನಪಿರುವದಿಲ್ಲ. ನಾನು ನನ್ನ ಶಪಥಪತ್ರದಲ್ಲಿ ಬರೆದಿರುವ ಚೆಕಬಂದಿ ಮತ್ತು ನಿ.ಪಿ-4 ರಲ್ಲಿರುವ ಚೆಕಬಂದಿ ಒಂದೇ ಇರುವ ಬಗ್ಗೆ ನನಗೆ ಗೊತ್ತಿರುವದಿಲ್ಲ. ಸದರಿ ವ್ಯವಹಾರಕ್ಕೆ ನನಗೆ ವಾದಿಯ ಚಿಕ್ಕಪ್ಪನಾದ ಗುರುಸಂಗಪ್ಪ ತೆಗ್ಗಿಹಳ್ಳಿ ಕರೆದಿರುತ್ತಾನೆ. ಸದರಿ ವ್ಯವಹಾರವು ಯಾವ ತಾರೀಖಿನಿಂದು ಆಗಿರುತ್ತದೆ ಅಂತಾ ನನಗೆ ನೆನಪಿರುವದಿಲ್ಲ. ಛಾಪಾಕಾಗದವನ್ನು 2009 ರಲ್ಲಿ ತಂದಿರುತ್ತಾರೆ. ಸದರಿ ಛಾಪಾಕಾಗದವು 50 ರೂಪಾಯದ್ದು ಇರುತ್ತದೆ.

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾನೆ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಛಾಪಾಕಾಗದವನ್ನು ಬರೆಯುವದಿಲ್ಲ ನಮ್ಮ ಊರಿನ ಹಿರಿಯರು ಬರೆಯುತ್ತಾರೆ, ನಾನು ಸಹಿ ಮಾತ್ರ ಮಾಡುತ್ತೇನೆ ಊರ ಹಿರಿಯರು ಛಾಪಾಕಾಗದವನ್ನು ಬರಿ ಅಂದರೆ ನಾನು ಬರೆಯುತ್ತೇನೆ. ಖರೀದಿ ಕರಾರು ಪತ್ರವನ್ನು ವ್ಯವಹಾರವಾದ ದಿನವೇ ನೋಡಿರುತ್ತೇನೆ ಯಾವ ತಾರೀಖಿನಿಂದು ಮಾತುಕತೆಯಾಗಿರುತ್ತದೆ ಅಂತಾ ನನಗೆ ಗೊತ್ತಿರುವದಿಲ್ಲ. ಮಾತುಕತೆಯನ್ನು ಮೊದಲೇ ಮಾಡಿದ್ದರು ನಂತರ ಕಾಗದವನ್ನು ಬರೆದಿರುತ್ತಾರೆ. ಮುಂಚೆ ಆದಂತಹ ಮಾತುಕತೆಯಲ್ಲಿ ನಾನು ಭಾಗವಹಿಸಿರುವದಿಲ್ಲ. ಸದರಿಯವರ ನಡುವೆ ಏನೂ ಮಾತುಕತೆ ಆಗಿರುತ್ತದೆ ಅಂತಾ ನನಗೆ ಗೊತ್ತಿರುವದಿಲ್ಲ. ಉಳಿದ ಸಾಕ್ಷಿದಾರರು ನಾನು ಹೋಗುವದಕ್ಕಿಂತ ಮೊದಲೇ ಬಂದಿದ್ದರು. ಸದರಿ ಮಾತುಕತೆಗೆ ರುದ್ರಪ್ಪನ ಮನೆಯಲ್ಲಿ

ಕುಳಿತುಕೊಂಡಿದ್ದರು. ನನ್ನ ಪ್ರಕಾರ ನಾನು ಹೋದಾಗ ಎಲ್ಲ ಮಾತುಕತೆ ಮುಗಿದಿತ್ತು. ಕಾಗದವನ್ನು ನಾನು ಹೋದ ನಂತರ ಬರೆಯಲಾಗಿತ್ತು. ಸದರಿ ಕಾಗದವನ್ನು ಬರೆಯಲು ನನಗೆ ಹೇಳಲಿಲ್ಲ. ಸದರಿ ಕಾಗದವನ್ನು ವಾದಿ ಬರೆದಿರುತ್ತಾನೆ. ವಾದಿಯು ಛಾಪಾಕಾಗದವನ್ನು ಬರೆಯುವದನ್ನು ನಾನು ನೋಡಿರುತ್ತೇನೆ. ವಾದಿಯು ಕರಿ ಬಾಲ ಪೆನನಿಂದ ಬರೆದಿರುತ್ತಾನೆ. ದಾಖಲೆಯನ್ನು ಪೂರ್ತಿ ಬರೆದಾದ ನಂತರ ಪೆನ್ನಿನ ಮಸಿ ತೀರಿರುತ್ತದೆ. ಇನ್ನೊಂದು ಪೆನ್ನನ್ನು ಯಾರ ಹತ್ತಿರ ಇಸಿದುಕೊಂಡು ಸಹಿ ಮಾಡಿರುತ್ತಾರೆ ಅಂತಾ ನನಗೆ ಗೊತ್ತಿರುವದಿಲ್ಲ. ಸದರಿ ಕಾಗದವನ್ನು ಬರೆಯಲು ಮಾಹಿತಿಯನ್ನು ಪ್ರತಿವಾದಿಯು ನೀಡಿರುತ್ತಾನೆ. ಕರಿಬಾಲಪೆನ್ನನಿಂದ ಬರೆದ ಛಾಪಾಕಾಗದ ಎಲ್ಲಿಗೆ ಬಂದು ಮಸಿ ತೀರಿತು ಅಂತಾ ನನಗೆ ಹೇಳಲು ಬರುವದಿಲ್ಲ.

ಪ್ರತಿವಾದಿಯು ಟೆಲಿಪೋನ ಇಲಾಖೆಯಲ್ಲಿ ಟೆಲಿಪೋನ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದನು ಅಂದರೆ ಸರಿ. ಆತನಿಗೆ ಸಾಕಷ್ಟು ಸಂಬಳ ಇರುತ್ತದೆ ಅಂದರೆ ಸರಿ. ಪ್ರತಿವಾದಿಯ ಹೆಸರಿನಲ್ಲಿ ಸದರಿ ಆಸ್ತಿಯನ್ನು ಹೊರತುಪಡಿಸಿ ಇನ್ನು 6 ಎಕರೆ ಜಮೀನು ಇತ್ತು ಅಂದರೆ ಸರಿ. ಸದರಿ 6 ಎಕರೆ ಜಮೀನು ಎರಡು ಬೆಳೆಗಳನ್ನು ತೆಗೆಯುವ ಜಮೀನಾಗಿತ್ತು ಅಂದರೆ ಸರಿಯಲ್ಲ. ಅದು ಒಂದು ಸಾರಿ ಬೆಳೆಯುವ ಬೆಳೆಯಾಗಿತ್ತು ಎಂದು ನುಡಿಯುತ್ತಾರೆ. ದಾವಾದಾಸ್ತಿಯು ಎರಡು ಬೆಳೆಗಳನ್ನು ತೆಗೆಯುವ ಆಸ್ತಿಯಾಗಿರುತ್ತದೆ. ದಾವಾದಾಸ್ತಿಗೆ ಹೊಂದಿಕೊಂಡು ಧರ್ಮಾ ನದಿ ಇರುವದರಿಂದ ಒಂದೇ ಬೆಳೆಗೆ ಮೂವತ್ತರಿಂದ ನಲವತ್ತು ಸಾವಿರಗಳವರೆಗೆ ಉತ್ಪನ್ನವನು ತೆಗೆಯಬಹುದು ಅಂದರೆ ಸರಿ. ಪ್ರತಿವಾದಿಗೆ ಸಾಕಷ್ಟು ಸಂಬಳ ಮತ್ತು ಉತ್ಪನ್ನ ಇದ್ದುದ್ದರಿಂದ ಅವನಿಗೆ ಹಣದ ಅವಶ್ಯಕತೆ ಇರಲಿಲ್ಲ ಅಂದರೆ ಸರಿ. ನಾವು ಮಾತುಕತೆಗೆ ಬೆಳಿಗ್ಗೆ 11-30 ಗಂಟೆಗೆ ಹೋಗಿರುತ್ತೇವೆ. ಛಾಪಾಕಾಗದವನ್ನು ಬರೆದು ಮುಗಿಸುವದರಲ್ಲಿ

ಒಂದು ಗಂಟೆಯಾಗಿರುತ್ತದೆ. ನಾನು ಛಾಪಾಕಾಗದವನ್ನು ಬರೆದ ನಂತರ ಒದಿ ತಿಳಿದುಕೊಂಡಿರುವದಿಲ್ಲ. ಛಾಪಾಕಾಗದಕ್ಕೆ ಎಲ್ಲರೂ ನೀಲಿ ಪೆನ್ನನಿಂದ ಸಹಿ ಮಾಡಿರುತ್ತಾರೆ. ವಾದಿ ಮತ್ತು ಪ್ರತಿವಾದಿ ನೀಲಿ ಪೆನ್ನನಿಂದ ಸಹಿ ಮಾಡಿರುತ್ತಾರೆ. ಸ್ಥಳ ಮತ್ತು ದಿನಾಂಕವನ್ನು ನೀಲಿ ಪೆನ್ನನಿಂದ ಸಹಿ ಮಾಡಿರುತ್ತಾರೆ. ನಾವು ವಾದಿಗೆ ಛಾಪಾ ಕಾಗದವನ್ನು ನೀನೇ ತಂದು ನೀನೇ ಬರೆಯುವದು ಸರಿಯಲ್ಲ, ಬೇರೆಯವರ ಕಡೆ ಬರೆಸೋಣ ಅಂತಾ ನಾನು ಹೇಳಿರುವದಿಲ್ಲ. ಆ ದಿನ ಹಣವನ್ನು ರೂ.32,450/- ಕೊಟ್ಟಿರುತ್ತಾರೆ. ಉಳಿದ 50-00 ರೂಪಾಯಿ ಕೊಡುವ ಬಗ್ಗೆ ನಾವು ಕೇಳಿರುವದಿಲ್ಲ. ಉಳಿದ 50-00 ರೂಪಾಯಿ ಕೊಟ್ಟು ಖರೀದಿ ಕಾಗದ ಮಾಡಿಕೊಳ್ಳೀರಿ ಅಂತಾ ನಾವು ಹೇಳಲಿಲ್ಲ. ಖರೀದಿ ಕಾಗದದಲ್ಲಿ ಏನು ಶರತ್ತುಗಳನ್ನು ಬರೆಯಲಾಗಿದೆ ಅಂತಾ ನನಗೆ ಗೊತ್ತಿರುವದಿಲ್ಲ. ಪಹಣಿ ಪತ್ರಿಕೆಯನ್ನು ತೆಗೆದುಕೊಂಡು ಹೋಗಿ ಖರೀದಿ ಮಾಡಲು ಯಾವುದೇ ತೊಡಕು ಇರಲಿಲ್ಲ. ಈಗ ಸಧ್ಯದ ದಾವಾದಾಸ್ತಿಯ ಉತಾರವನ್ನು ನಾನು ನೋಡಿರುವದಿಲ್ಲ. ಈಗ ಸಧ್ಯ ಸದರಿ ಆಸ್ತಿಯು ಸಾಮೂಹಿಕವಾಗಿ ಅಥವಾ ಪ್ರತ್ಯೇಕವಾಗಿ ಇದ್ದ ಬಗ್ಗೆ ನನಗೆ ಗೊತ್ತಿರುವದಿಲ್ಲ. ರೂ.32,450/- ರೂಪಾಯಿ ಎಷ್ಟು ಮುಖಬೆಲೆಯ ನೋಟುಗಳು ಇದ್ದವು ಅನ್ನುವ ಬಗ್ಗೆ ನನಗೆ ಗೊತ್ತಿರುವದಿಲ್ಲ. ನಾನು ಸದರಿ ಹಣವನ್ನು ಎಣಿಸಿಕೊಟ್ಟಿರುವದಿಲ್ಲ. ನಾನು ಸದರಿ ಹಣವನ್ನು ಎಣಿಸುವ ಸಮಯದಲ್ಲಿ ಇದ್ದೇನು. ಸದರಿ ಹಣವನ್ನು ವಾದಿಯು ಎಣಿಸಿ ಪ್ರತಿವಾದಿಗೆ ಕೊಟ್ಟಿರುತ್ತಾನೆ. ನಡುವೆ ಇದ್ದಂತಹ ಸಾಕ್ಷಿದಾರರು ಸದರಿ ಹಣವನ್ನು ಎಣಿಸಿಕೊಟ್ಟಿರುವದಿಲ್ಲ. ಪ್ರತಿವಾದಿಯ ಮಗಳ ಮದುವೆಯ ಉದ್ದೇಶಕ್ಕಾಗಿ ದಾವಾದಾಸ್ತಿಯನ್ನು ಮಾರಾಟ ಮಾಡುತ್ತಿದ್ದೇನೆ ಅಂತಾ ಪ್ರತಿವಾದಿಯು ಹೇಳುತ್ತಿದ್ದನು. ನನಗೆ ನಿಖರವಾಗಿ ಸದರಿ ವಿಷಯದ ಬಗ್ಗೆ ನನಗೆ

ಮಾಹಿತಿ ಇರುವದಿಲ್ಲ. ಸದರಿ ದಿನದಂದು ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳು ಬಂದಿರಲಿಲ್ಲ. ನನಗೆ ಇಷ್ಟೇ ಹಣಕ್ಕೆ ವ್ಯವಹಾರವನ್ನು ಮುಗಿಸಿರುತ್ತಾರೆ ಅಂತಾ ನಾನು ಸಹಿ ಮಾಡಲು ಹೋದ ದಿನ ಗೊತ್ತಾಗಿರುತ್ತದೆ. ಮೊದಲೇ ಆದ ಮಾತುಕತೆಯಲ್ಲಿ ಎಷ್ಟು ಹಣ ಸಂಚಕಾರವಾಗಿ ಕೊಟ್ಟಿರುತ್ತಾರೆ ಅಂತಾ ನನಗೆ ಗೊತ್ತಿರುವದಿಲ್ಲ. ಯಾವುದೇ ವ್ಯವಹಾರವಾದ ದಿನ ಸಂಚಕಾರ ಹಣ ಅಂತಾ ರೂ.101, 1001, 51, 501 ಹಣವನ್ನು ಕೊಡುತ್ತಾರೆ ಅಂದರೆ ಸರಿ. ಬಾಕಿ ಹಣವನ್ನು ಸಂಚಕಾರ ಪತ್ರ ಬರೆಯುವ ಸಮಯದಲ್ಲಿ ಕೊಡುವ ಬಗ್ಗೆ ಮಾತನಾಡುತ್ತಾರೆ ಅಂದರೆ ಸರಿ. ಪ್ರತಿವಾದಿಯು ತನ್ನ ಮಗಳ ಮದುವೆಗೆ ಹಣದ ಅವಶ್ಯಕತೆ ಇರುವದರಿಂದ ವಾದಿಗೆ ಸಂಚಕಾರ ಪತ್ರವನ್ನು ಮಾಡಿಕೊಟ್ಟಿರುತ್ತಾನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಸದರಿ ವ್ಯವಹಾರದಲ್ಲಿ ಭಾಗವಹಿಸಿರುತ್ತೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ದಿನ ವಾದಿಯು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾನೆ ಅಂದರೆ ಸರಿಯಲ್ಲ. ವಾದಿ ಮತ್ತು ನಾನು ಒಂದೇ ಊರಿನವರು ಇರುವದರಿಂದ ವಾದಿಗೆ ಅನುಕೂಲವಾಗಲೀ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆಸ್ತಿಯನ್ನು ಸಂಚಕಾರ ಕೊಟ್ಟ ದಿನದಿಂದಲೇ ವಾದಿಯೇ ಕಬ್ಜಾ ವಹಿವಾಟಿಯಲ್ಲಿರುತ್ತಾನೆ. ವಾದಿಯು ಖಾಲಿ ಛಾಪಾಕಾಗದಕ್ಕೆ ಪ್ರತಿವಾದಿಯ ಸಹಿ ಪಡೆದು ಮತ್ತು ಸಾಕ್ಷಿದಾರರ ಸಹಿ ಪಡೆದು ಸುಳ್ಳು ದಾವೆಯನ್ನು ದಾಖಲಿಸಿರುತ್ತಾನೆ, ಅದಕ್ಕೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಯು ವಾದಿಗೆ ರೂ.50/- ಬಾಕಿ ಹಣ ಕೊಡುವದು ಇರುತ್ತದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಮಾಹಿತಿ ಇಲ್ಲದೇ

ಇದ್ದರೂ ಪ್ರತಿವಾದಿಯ ಮೇಲಿನ ಹಳೆಯ ದ್ವೇಷದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಿಸಿದೆ).

ಓ.ಹೇ.ಕೇ.ಸ. ಇದೆ ಎಂದು ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ದಿನಾಂಕಃ 18-09-2018 ಹಾನಗಲ್.

ಸಾಕ್ಷಿದಾರರ ಸಹಿಃ